FEBRUARY 26, 2025

# AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ರಾಜ್ಯದ ನೀರಾವರಿ ಯೋಜನೆಗಳ,** 3 ಸಾವಿರದ 77 ಕೋಟಿ ರೂಪಾಯಿ ಅನುದಾನ ಬಿಡುಗಡೆಗೆ, ಕೇಂದ್ರಕ್ಕೆ ಮನವಿ.
- **ರಾಜ್ಯದ ಗಡಿಗಳಲ್ಲಿ,** ಸಾಮರಸ್ಯ ಕದಡುವವರ ವಿರುದ್ಧ, ಕಠಿಣ ಕಾನೂನು ಕ್ರಮಕ್ಕೆ, ರಾಜ್ಯ ಸರ್ಕಾರದ ನಿರ್ಣಯ.
- **ಬೆಂಗಳೂರಿನಲ್ಲಿ ಇಂದು,** 'ಕರ್ನಾಟಕ ಇಂಟರ್‌ನ್ಯಾಶನಲ್, ಟ್ರಾವೆಲ್ ಎಕ್ಸ್ ಪೋ' ಪ್ರದರ್ಶಿನಿ, ಉದ್ಘಾಟನೆ.
- **ಇಂದು, ಮಹಾ ಶಿವರಾತ್ರಿ;** ನಾಡಿನಾದ್ಯಂತ ಶಿವಾಲಯಗಳಲ್ಲಿ, ವಿಶೇಷ ಪೂಜಾ ಕೈಂಕರ್ಯ.

<><><>

**ಈಗ ವಾರ್ತೆಗಳ ವಿವರ**

<><><>

**ಪ್ರಧಾನಮಂತ್ರಿ ಕೃಷಿ ಸಿಚಾಯಿ ಯೋಜನೆ** ಹಾಗೂ ಅಟಲ್ ಭೂ ಜಲ ಯೋಜನೆ ಅಡಿ, ಸಣ್ಣ ನೀರಾವರಿ ಇಲಾಖೆ ಮೂಲಕ ಜಾರಿಗೊಂಡ, ಯೋಜನೆಗಳ ಬಗ್ಗೆ, ರಾಜ್ಯ ಸರ್ಕಾರ ಸಲ್ಲಿಸಿರುವ ಪ್ರಸ್ತಾವಗಳನ್ನು ಪರಿಗಣಿಸುವಂತೆ, ಸಚಿವ ಎನ್.ಎಸ್. ಬೋಸರಾಜು ಹಾಗೂ ಸಚಿವ ಡಿ.ಕೆ. ಶಿವಕುಮಾರ, ಕೇಂದ್ರದ ಜಲ ಶಕ್ತಿ ಖಾತೆ ಸಚಿವ ಸಿ.ಆರ್. ಪಾಟೀಲ ಅವರಿಗೆ ಮನವಿ ಸಲ್ಲಿಸಿದ್ದಾರೆ. ಹೊಸ ದಿಲ್ಲಿಯಲ್ಲಿ ಸಚಿವರನ್ನು ಭೇಟಿ ಮಾಡಿ ಸಮಾಲೋಚಿಸಿದ, ಉಭಯ ಸಚಿವರು, ಕಾಲಮಿತಿಯಲ್ಲಿ ಯೋಜನೆಗಳನ್ನು ಪೂರ್ಣಗೊಳಿಸಲು, 3 ಸಾವಿರದ 77 ಕೋಟಿ ರೂಪಾಯಿ ಅನುದಾನ ಸಹ ಬಿಡುಗಡೆ ಗೊಳಿಸುವಂತೆ, ಕೇಂದ್ರ ಸಚಿವರಿಗೆ ಮನವಿ ಮಾಡಿದರು.

<><><>

**ಕೇಂದ್ರದ ಜಲ ಶಕ್ತಿ ಖಾತೆ** ರಾಜ್ಯ ಸಚಿವ ವಿ. ಸೋಮಣ್ಣ, ರಾಜ್ಯದ ಹೊಸ ದಿಲ್ಲಿ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ ಪಾಲ್ಗೊಂಡಿದ್ದರು.

<><><>

**ರಾಜ್ಯದ ಗಡಿಗಳಲ್ಲಿ,** ಭಾ ಾ ವೈ ್ಮ್ಯ ಬಿತ್ತಿ, ಸಾಮರಸ್ಯ ಕದಡಿ, ಕನ್ನಡಿಗರ ಮೇಲೆ ಹಲ್ಲೆ ಮಾಡುವ, ಸಮಾಜಘಾತುಕರ ವಿರುದ್ಧ, ರಾಜ್ಯ ಸರ್ಕಾರ ಕಠಿಣ ಕಾನೂನು ಕ್ರಮ ಜರುಗಿಸಲಿದೆ ಎಂದು, ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟ ಪಡಿಸಿದ್ದಾರೆ. ಕೊಡಗು ಜಿಲ್ಲೆ, ಕುಶಾಲ ನಗರದಲ್ಲಿ ಸಚಿವರು ಸುದ್ದಿಗೋಷ್ಠಿ ನಡೆಸಿದರು. ಪರಸ್ಪರ ಭಾ ಾ ಸಾಮರಸ್ಯ ಮೆರೆಯಬೇಕಾದ ಹೊಣೆಗಾರಿಕೆ ಮರೆತು, ಸೌಹಾರ್ದತೆಗೆ ಭಂಗ ತಂದು, ಹಲ್ಲೆಗೈದ ಪುಂಡರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದರು.

<><><>

**ಈ ಮಧ್ಯೆ, ಬೆಳಗಾವಿಯ ಬಾಳೆಕುಂದ್ರಿ ಬಳಿ,** ಪ್ರಯಾಣಿಕರಿಂದ ಹಲ್ಲೆಗೊಳಗಾದ, ನಿರ್ವಾಹಕರ ವಿರುದ್ಧ, ಬಾಲಕಿ ದಾಖಲಿಸಿದ್ದ ಪೋಕ್ಸೋ ಪ್ರಕರಣವನ್ನು, ಅವರ ತಾಯಿ ಹಿಂಪಡೆದಿದ್ದಾರೆ. ಪ್ರಕರಣ ದಾಖಲಿಸಿದ್ದ, ಮಾರಿಹಾಳ ಪೊಲೀಸ್ ಠಾಣೆಯ ಸಿ.ಪಿ.ಐ. ಗುರುರಾಜ್ ಕಲ್ಯಾಣಶೆಟ್ಟಿ ಅವರನ್ನು, ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ವರ್ಗಾವಣೆ ಮಾಡಿದ್ದಾರೆ.

<><><>

**ಕರ್ನಾಟಕ ಹಾಗೂ ಮಹಾರಾಷ್ಟ್ರ** ರಾಜ್ಯಗಳ ನಡುವೆ, ಬಿಗುವಿನ ವಾತಾವರಣ ಮುಂದುವರೆದಿದೆ. ಆದರೆ, ಬಸ್ ಸಂಚಾರ ಪುನಾರಂಭಿಸುವ ಕುರಿತು, ಬೆಳಗಾವಿ ಹಾಗೂ ಕೊಲ್ಹಾಪುರ ಜಿಲ್ಲಾಧಿಕಾರಿ ಮತ್ತು ಪೊಲೀಸ್ ವರಿ ್ಠಾಧಿಕಾರಿಗಳು, ವಿಡಿಯೋ ಸಂವಾದ ನಡೆಸಿ, ಪರಿಸ್ಥಿತಿ ಅವಲೋಕಿಸಿದರು. ಸೂಕ್ತ ರಕ್ಷಣೆ ಒದಗಿಸಿ, ಬಸ್‌ಗಳ ಸಂಚಾರಕ್ಕೆ ಅನುವು ಮಾಡಲು, ಸಭೆ ನಿರ್ಧರಿಸಿತು.

<><><>

**‘ಒಂದು ರಾಜ್ಯ: ಹಲವು ಜಗತ್ತುಗಳು’** ಧ್ಯೇಯದೊಂದಿಗೆ, ಬೆಂಗಳೂರಿನಲ್ಲಿ ಇಂದಿನಿಂದ ಮೂರು ದಿನಗಳ ವರೆಗೆ, ಕರ್ನಾಟಕ ಪ್ರವಾಸೋದ್ಯಮ ಸೊಸೈಟಿ ಸಹಯೋಗದಲ್ಲಿ, ‘ಕರ್ನಾಟಕ ಇಂಟರ್‌ನ್ಯಾಶನಲ್ ಟ್ರಾವೆಲ್ ಎಕ್ಸ್ ಪೋ’ ಪ್ರದರ್ಶಿನಿ ಆಯೋಜಿತವಾಗಿದೆ ಎಂದು, ಪ್ರವಾಸೋದ್ಯಮ ಖಾತೆ ಸಚಿವ, ಎಚ್.ಕೆ. ಪಾಟೀಲ ತಿಳಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಸಚಿವರು, ಪ್ರತಿ ವ ್ಷ 1 ಕೋಟಿ 25 ಲಕ್ಷ ಪ್ರವಾಸಿಗರು, ರಾಜ್ಯದ 25 ಸಾವಿರಕ್ಕೂ ಹೆಚ್ಚು, ತಾಣಗಳಿಗೆ ಭೇಟಿ ನೀಡುತ್ತಿದ್ದಾರೆ. ಆ ಪೈಕಿ ಕೇವಲ 8 ನೂರು ಸ್ಥಳಗಳು ಮಾತ್ರ, ಸಂರಕ್ಷಿತ ತಾಣಗಳ ಪಟ್ಟಿಯಲ್ಲಿವೆ. ಸ್ಥಳೀಯರಿಗೆ ಉದ್ಯೋಗ ಕಲ್ಪಿಸಲು, ಹೊಸ ತಾಣಗಳನ್ನು ಅನ್ವೇಷಿಸಬೇಕಿದೆ ಎಂದರು.

<><><>

**ನಾಗರಹೊಳೆ ಹುಲಿ ಸಂರಕ್ಷಿತ** ಅಭಯಾರಣ್ಯ, ಮೈಸೂರು ಹಾಗೂ ಕೊಡಗು ಜಿಲ್ಲೆಗಳ ನೀಲಗಿರಿ ತಪ್ಪಲಿನಲ್ಲಿ ಹಬ್ಬಿದೆ. ಜೇನು ಕುರುಬರು, ಸೋಲಿಗರು, ಕೊಡವರ ಸಹಕಾರದಲ್ಲಿ, ಅರಣ್ಯ ಸಂರಕ್ಷಣೆ ಮತ್ತು ಕಾಡ್ಗಿಚ್ಚು ನಿಯಂತ್ರಿಸುವಲ್ಲಿ, ಅಂದು ಹುಣಸೂರು ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿಯಾಗಿ ವಿಶೇಷ ಪ್ರಯತ್ನ ಕೈಗೊಂಡು ಗಮನ ಸೆಳೆದ, ಇಂದು ರಾಮನಗರ ವಲಯದ ಅರಣ್ಯ ಸಂರಕ್ಷಣಾಧಿಕಾರಿಯಾಗಿರುವ, ಪ್ರಸನ್ನಕುಮಾರ, ಸ್ಥಳೀಯ ಸಮುದಾಯದ ಸಹಭಾಗಿತ್ವದಲ್ಲಿ, ಕಾಡ್ಗಿಚ್ಚು ನಿಯಂತ್ರಿಸಿದ ಅನುಭವವನ್ನು, ಪ್ರದೇಶ ಸಮಾಚಾರಕ್ಕಾಗಿ, ಹಂಚಿಕೊಂಡಿದ್ದಾರೆ.

<><><>

**ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ ಪ್ರಸನ್ನಕುಮಾರ ಧ್ವನಿ 60 ಸೆಕೆಂದುಗಳು**

<><><>

**ಈ ಮಧ್ಯೆ, ಚಾಮರಾಜನಗರ ಜಿಲ್ಲೆಯ,** ಮಹದೇಶ್ವರ ಮತ್ತು ಕಾವೇರಿ ವನ್ಯಜೀವಿ ಧಾಮದಲ್ಲಿ, ಕಾಡ್ಗಿಚ್ಚು ಹಬ್ಬಿ, ಸಾವಿರಾರು ಎಕರೆಗಳಷ್ಟು ಅಮೂಲ್ಯ ಕಾಡು, ಸುಟ್ಟು ಭಸ್ಮವಾಗಿದೆ. ಬೆಂಕಿಯನ್ನು ಹತೋಟಿಗೆ ತರಲು, ಅರಣ್ಯ ಇಲಾಖೆ ಸಿಬ್ಬಂದಿ ಹಗಲಿರುಳು ಶ್ರಮಿಸುತ್ತಿದ್ದಾರೆ.

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ**

**ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.**

<><><>

**ಇಂದು, ಮಹಾ ಶಿವರಾತ್ರಿ. ನಾಡಿನಾದ್ಯಂತ ಶಿವಾಲಯಗಳನ್ನು** ವಿಶೇಷವಾಗಿ ಅಲಂಕರಿಸಲಾಗಿದೆ. ಇಂದು ಬೆಳಗಿನ ಜಾವದ ಬ್ರಾಹ್ಮೀ ಮಹೂರ್ತದಲ್ಲಿ, ಪೂಜಾ ಕೈಂಕರ್ಯಗಳು ಆರಂಭವಾಗಿವೆ. ಹಬ್ಬದ ಹಿಂದಿನ ದಿನವಾದ ನಿನ್ನೆ, ಮಾರುಕಟ್ಟೆಗಳಲ್ಲಿ ಜನ ಸಾಮಾನ್ಯರಿಂದ, ಹೂವು, ಹಣ್ಣು, ಖರ್ಜೂರ ಸೇರಿದಂತೆ, ಪೂಜೆಯ ವಸ್ತುಗಳ ಖರೀದಿ ಭರಾಟೆ, ಅಗತ್ಯ ವಸ್ತುಗಳ ಬೆಲೆ ಏರಿಕೆಯ ಬಿಸಿಯ ಮಧ್ಯೆಯೂ, ಜೋರಾಗಿತ್ತು. ಇಂದು ನಾಡನ ಶಿವ ದೇಗುಲಗಳಲ್ಲಿ ಅಹೋರಾತ್ರಿ ಪಾರಾಯಣ, ಭಜನೆ ಜರುಗಲಿವೆ. ಜೊತೆಗೆ ಉಪವಾಸ ವ್ರತಾಚರಣೆ.

<><><>

**ಉತ್ತರಕನ್ನಡ ಜಿಲ್ಲೆಯ,** ಗೋಕರ್ಣ ಮತ್ತು ಮುರುಡೇಶ್ವರದಲ್ಲಿ, ಇಂದು ಅಹೋರಾತ್ರಿ ಜಾಗರಣೋತ್ಸವಕ್ಕೆ ಭರದ ಸಿದ್ಧತೆ ಕೈಗೊಳ್ಳಲಾಗಿದೆ.

<><><>

**ಧಾರವಾಡದ ಶ್ರೀ ಮುದಿ ಮಾರುತಿ ದೇವಸ್ಥಾನದಲ್ಲಿ,** ಶ್ರೀ ಶಿವಸ್ಫೂರ್ತಿ ಮಹಾ ಶಿವರಾತ್ರಿ ಸಂಗೀತೋತ್ಸವ ಸಮಿತಿ, 49ನೇ ವರ್ಷದ ಅಹೋರಾತ್ರಿ ಸಂಗೀತ ಕಾರ್ಯಕ್ರಮ, ಸಾಧಕ ಶಿವ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಿದೆ.

<><><>

**ಚಿಕ್ಕಬಳ್ಳಾಪುರ ತಾಲೂಕಿನ,** ಭೋಗ ನಂದೀಶ್ವರ ದೇವಾಲಯ ಹಾಗೂ ನಂದಿ ಬೆಟ್ಟದ ಯೋಗ ನಂದೀಶ್ವರ ದೇವಾಲಯದಲ್ಲಿ, ವಿಶೇ ಿ ಪೂಜೆ, ಭಜನೆ ಆಯೋಜಿತವಾಗಿದೆ. ನೆರೆಯ ಆಂಧ್ರ, ತೆಲಂಗಾಣ ಹಾಗೂ ತಮಿಳುನಾಡು ರಾಜ್ಯಗಳಿಂದ, ಭಕ್ತಾದಿಗಳು ಆಗಮಿಸಲಿದ್ದಾರೆ.

<><><>

**ತಮಿಳುನಾಡಿನ ಕೊಯಂಬತ್ತೂರಿನಲ್ಲಿ** ಸದ್ಗುರು ಜಗ್ಗಿ ವಾಸುದೇವ್ ನೇತೃತ್ವದಲ್ಲಿ ಇಂದು ಮಹಾ ಶಿವರಾತ್ರಿ ಹಾಗೂ ಮಹಾಮಂತ್ರ ದೀಕ್ಷೆ ಕಾರ್ಯಕ್ರಮ ಆಯೋಜಿತವಾಗಿದೆ. ಕೇಂದ್ರ ಗೃಹ ಖಾತೆ ಸಚಿವ ಅಮಿತ್ ಶಾ ಪಾಲ್ಗೊಳ್ಳಲಿದ್ದಾರೆ.

<><><>

**ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನ,** 144 ವರ್ಷಗಳ ಬಳಿಕ ಆಯೋಜಿತ, ಮಹಾಕುಂಭ ಮೇಳ, ಇಂದು, ಶಿವರಾತ್ರಿಯ ಪುಣ್ಯ ಸ್ನಾನದೊಂದಿಗೆ, 45 ದಿನಗಳ ಬಳಿಕ ಸಂಪನ್ನಗೊಳ್ಳಲಿದೆ. ಈಗಾಗಲೇ 60 ಕೋಟಿಗೂ ಅಧಿಕ ಶ್ರದ್ಧಾಳುಗಳು, ತ್ರಿವೇಣಿ ಸಂಗಮದಲ್ಲಿ ಪುಣ್ಯ ಸ್ನಾನ ಕೈಗೊಂಡಿದ್ದಾರೆ. 15 ಸಾವಿರಕ್ಕೂ ಅಧಿಕ ಸ್ವಚ್ಛತಾ ಸೇನಾನಿಗಳು, ನೈರ್ಮಲ್ಯ ಅಭಿಯಾನದಲ್ಲಿ ಪಾಲ್ಗೊಂಡು, ವಿಶ್ವ ದಾಖಲೆ ಸೃಷ್ಟಿಸಿದ್ದಾರೆ.

<><><>

**ಪಂಡಿತ ಪಂಚಾಕ್ಷರ ಗವಾಯಿಗಳು,** ಪಂಡಿತ ಬಸವರಾಜ ರಾಜಗುರುಗಳ ಪರಂಪರೆಯ ವಾರಸುದಾರ, ಪಂಡಿತ ಗಣಪತಿ ಭಟ್ ಹಾಸಣಗಿ ಅವರಿಗೆ, ಮಾರ್ಚ್ 3ನೇ ತಾರೀಖು, ಪಂಡಿತ ಪುಟ್ಟರಾಜ ಗವಾಯಿಗಳ 111 ನೇ ಜಯಂತ್ಯುತ್ಸವದಂದು, ಧಾರವಾಡದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ, 'ಪುಟ್ಟರಾಜ ರಾಷ್ಟ್ರೀಯ ಸಮ್ಮಾನ್' ಪ್ರದಾನ ಮಾಡಲಾಗುತ್ತಿದೆ. ಧಾರವಾಡದ ಪುಟ್ಟರಾಜ ಗವಾಯಿ ಪ್ರತಿಷ್ಠಾನ, ಕೊಡಮಾಡುವ, ಈ ಪುರಸ್ಕಾರ 1 ಲಕ್ಷ ರೂಪಾಯಿ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ. ಪಂಡಿತ ಗಣಪತಿ ಭಟ್, ಹಾಸಣಗಿ ಅವರು ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

**ಪಂ. ಗಣಪತಿ ಭಟ್, ಹಾಸಣಗಿ ಧ್ವನಿ 60 ಸೆಕೆಂದುಗಳು**

<><><>

**ಉತ್ತರಕನ್ನಡ ಜಿಲ್ಲೆ, ಕಾರವಾರ ತಾಲೂಕಿನ,** ಸಾವಂತವಾಡಾ ಹೋಬಳಿ ವ್ಯಾಪ್ತಿಯಲ್ಲಿ, ನಿನ್ನೆ ಉಷ್ಣಾಂಶ 41 ದಶಾಂಶ 3 ಡಿಗ್ರಿ ಸೆಲ್ಶಿಯಸ್ ತಲುಪಿತ್ತು. ಇಂದು ರಾಜ್ಯದಲ್ಲೇ ಗರಿಷ್ಟ ತಾಪಮಾನ ಎಂದು, ರಾಜ್ಯ ನೈಸರ್ಗಿಕ ವಿಕೋಪ ನಿಗಾ ಕೇಂದ್ರ ತಿಳಿಸಿದೆ. ಕರಾವಳಿಯ ಮೂರು ಜಿಲ್ಲೆಗಳ, 7 ಸ್ಥಳಗಳಲ್ಲಿ, ಸರಾಸರಿ ಉಷ್ಣಾಂಶ 40 ಡಿಗ್ರಿ ಸೆಲ್ಶಿಯಸ್ ಮೀರಿತ್ತು. ಉತ್ತರಕನ್ನಡ ಜಿಲ್ಲೆಯ 6, ದಕ್ಷಿಣಕನ್ನಡದ 4, ಉಡುಪಿಯ 2 ಹಾಗೂ ರಾಯಚೂರು ಜಿಲ್ಲೆಯ 1 ಕಡೆ, ಸರಾಸರಿ ಉಷ್ಣಾಂಶ, 39 ಡಿಗ್ರಿ ಸೆಲ್ಶಿಯಸ್ ಗಿಂತ ಹೆಚ್ಚು, ದಾಖಲಾಗಿದೆ.

<><><>

**ಸ್ವಾತಂತ್ರ್ಯ ವೀರ,** ವಿನಾಯಕ ದಾಮೋದರ ಸಾವರ್ಕರ್ ಅವರ, 58ನೇ ಪುಣ್ಯತಿಥಿ ಇಂದು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ರಾಜ್ಯದ ನೀರಾವರಿ ಯೋಜನೆಗಳ,** 3 ಸಾವಿರದ 77 ಕೋಟಿ ರೂಪಾಯಿ ಅನುದಾನ ಬಿಡುಗಡೆಗೆ, ಕೇಂದ್ರಕ್ಕೆ ಮನವಿ.
- **ರಾಜ್ಯದ ಗಡಿಗಳಲ್ಲಿ,** ಸಾಮರಸ್ಯ ಕದಡುವವರ ವಿರುದ್ಧ, ಕಠಿಣ ಕಾನೂನು ಕ್ರಮಕ್ಕೆ, ರಾಜ್ಯ ಸರ್ಕಾರದ ನಿರ್ಣಯ.
- **ಬೆಂಗಳೂರಿನಲ್ಲಿ ಇಂದು,** 'ಕರ್ನಾಟಕ ಇಂಟರ್‌ನ್ಯಾಶನಲ್, ಟ್ರಾವೆಲ್ ಎಕ್ಸ್ ಪೋ' ಪ್ರದರ್ಶಿನಿ, ಉದ್ಘಾಟನೆ.
- **ಇಂದು, ಮಹಾ ಶಿವರಾತ್ರಿ:** ನಾಡಿನಾದ್ಯಂತ ಶಿವಾಲಯಗಳಲ್ಲಿ, ವಿಶೇಷ ಪೂಜಾ ಕೈಂಕರ್ಯ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**